11. ಸಂದಲನ್ನು ಸಾಗಿಸುವದಕ್ಕೋಸ್ಕರ ಬೇಕಾಗುವ ವಿಪ೯ಾಟುಗಳನ್ನು ಕಂಟ್ರಾಕ್ಟುದಾರನೇ ಮಾಡಿಕೊಳ್ಳತಕ್ಕದ್ದು. ಸರ್ಕಾರದವರು ರಸ್ತೆಯನ್ನಾಗಲಿ ಭಂಡೀದಾರಿಯನ್ನಾಗಲಿ ಮಾಡಿಸಿಕೊಡುವದಕ್ಕೆ ಬದ್ದರಾಗಿರುವದಿಲ್ಲ. ಮತ್ತು ಈ ನೆಪದಿಂದ ಸಂದಲ್ ವಾಯಿದೆಯಲ್ಲಿ ತಾರದೆಯಿದ್ದರೆ, ಯಾವ ಕಾರಣವೂ ಅಂಗೀಕರಿಸಲ್ಪಡಲಾರದು.

12. ಇನ್ಯಾವ ಸಂಗತಿಗಳಾದರೂ ತಿಳಿದುಕೊಳ್ಳಬೇಕಾಗಿದ್ದಲ್ಲಿ ಕಿವಮೊಗ್ಗಾ ಡಿಸ್ಟ್ರಿಕ್ಟ ಫಾರೆಸ್ಟ ಆಫೀಸಿನಲ್ಲಿ ಕೇಳತಕ್ಕದ್ದು. ಮತ್ತು ಅಲ್ಲಿ ನೋಟಿಸ್ ಬೋರ್ಡಿನ ಮೇಲೆ ಇಸ್ತಿಹಾರುನಾಮೆಯ ನಕಲು ಮತ್ತು ಕಂಟ್ರಾಕ್ಟು ಮುಚ್ಚಳಿಕೆ ನಕಲು ಸಹ ನೋಡಬಹುದು.

ಸಿ. ಅಪ್ಪಯ್ಯ,
ಫಾರ್ ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್,
ಮೈಸೂರ್.

ನಗರ ಡಿವಿಜ್ಞ ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

ಸ೯ 1895—96ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 332.

ಮೃತಪಟ್ಟ ಶಿಲೆವಾನುಸಾಬರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಅಬ್ದುಲ್ ರಸೂಲುಸಾಬಿ ಬಿ ಶಿಲೆವ್ಯಾಸಾಬ್, ಚಿಕ್ಕಮಗಳೂರು ವಾಸಿ. ಮೃತಪಟ್ಟ ಸದರಿ ಶಿಲೆವ್ಯಾಸಾಬರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಚಿಕ್ಕಮಗಳೂರು ಸ್ಥಳದ ಅಬ್ದುಲ್ ರಸೂಲುಸಾಬರು, ಚಿಕ್ಕಮಗಳೂರು ವಾಸಸ್ಥರಾಗಿ ಮೃತಪಟ್ಟ ಶಿಲೆವ್ಯಾಸಾಬರ ಜಿಂದಗಿ ಬಗ್ಯಾಗಿ ಬರತಕ್ಕ ಚಿಕ್ಕಮಗಳೂರು ಮುನಸಿಫ್ ಕೋರ್ಟ್ 1894ನೇ ಇಸವಿ ಜಾರಿ ನಂಬರ್ 69ರಲ್ಲಿ ಬರಬೇಕಾದ 72—8—0 ರೂ. ಸಾಲವನ್ನು ವಸೂಲ್ ಮಾಡುವದಕ್ಕೆ ಸ೯1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ರಖಾಸ್ತುದಾರರಾದ ಅಬ್ದುಲ್ ರಸೂಲ್‌ಸಾಬರ ಅರ್ಜಿಯನ್ನು ಸ೯ 1896ನೇ ಇಸವಿ ಆಗಸ್ಟ್ ತಿಂಗಳ ತಾರೀಖು 28ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಿಲೆವ್ಯಾಸಾಬರ ಆಸ್ತಿಗೆ ಹಕ್ಕುದಾರರಾದ ವಿಷಯ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯುಪಡಿಸಿ ಇದೆ.

ಸ೯ 1896ನೇ ಇಸವಿ ಜೂ೯ ತಿಂಗಳ 12ನೇ ತಾರೀಖಿನಲ್ಲಿ ಕೋರ್ಟ್ ನೊಹರ್‌ನಿಸಿ ನನ್ನ ದಸ್ತಖತ್ತಿನೊಡನೆ ಕೊಡೋಣಾಗಿದೆ.

ಬಿ. ತಿರುಮಾಲಾಚಾರ್,
ಡಿಸ್ಟ್ರಿಕ್ಟ ಜಡ್ಜ.

Mysore Govt. Central Press, Bangalore.—1896.